# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








| | | | | | | | |
|---|---|---|---|---|---|---|---|
| ಸಂಪುಟ:01 | ಸಂಚಿಕೆ:242 | ನೋಂದಣಿ ನಂ.:KARKAN27911 | ವಿಜಯನಗರ | 20.02.2024 | ಮಂಗಳವಾರ | ಪುಟ:04 | ಬೆಲೆ:2 |
| Volume:01 | Issue:242 | Reg.No:KARKAN27911 | VIJAYANAGARA | 20.02.2024 | Tuesday | Page:04 | Rs:2 |







**ವಿಶೇಷ ಲೇಖನಗಳು**

## ವಿಚ್ಛೇದನ

ಪುಟ 2ರಲ್ಲಿ



ಲೇಖಕರು:
**ವೀಣಾ ಹೇಮಂತಗೌಡ ಪಾಟೀಲ್**
ಮುಂಡರಗಿ, ಗದಗ

## ಓದು ಬಲು ಸರಳ

ಪುಟ 2 ರಲ್ಲಿ



ಲೇಖಕರು:
**ಡಾ.ಸುಧಾಕರ ಜಿ. ಲಕ್ಕವಳ್ಳಿ**

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

**ಮೈಕ್ರೋ ನ್ಯೂಸ್**

## ಫೆ.21 ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಹೊಸಪೇಟೆ**

ಜೆಸ್ಕಾಂ ಹೊಸಪೇಟೆ ನಗರ ವಿಭಾಗದ 33/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಪ್ರಯುಕ್ತ ಫೆ. 21ರಂದು ಬೆಳಿಗ್ಗ 9 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಅಂದು ಬಸವೇಶ್ವರ ಬಡವಾಣೆ, ಜಬ್ಬಲ್ ಸರ್ಕಲ್, ಶಾನಬಾಗ್ ಸರ್ಕಲ್, ರಾಜೀವ ನಗರ, ರೈಲ್ವೆ ಸ್ಟೇಷನ್, ಅಮರಾವತಿ, ಚಿತ್ತವಾಡಗಿ, ಸುಗರ ಪ್ಯಾಕ್ಟರಿ, ಹಂಪಿರೋಡ್, ಗಣೇಶ್ ಗುಡಿ, ನೌಕರ ಕಾಲೋನಿ, ಗಾಂಧಿ ಸರ್ಕಲ್, ಬಸ್ ಸ್ಟ್ಯಾಂಡ್, ಮೇನ್ ರೋಡ್, ಕೋರ್ಟ್, ರಾಣಿಪೇಟ, ಭಟ್ರಹಳ್ಳಿ, ಬೆನಕಾಪುರ, ಬಸವನದುರ್ಗ, ನಾಗೇನಹಳ್ಳಿ ಹಾಗೂ ನರಸಾಪುರ ಭಾಗದಲ್ಲಿ ವಿದ್ಯುತ್ ಉಂಟಾಗಲಿದ್ದು ಸಾರ್ವಜನಿಕರು ಸಹಕರಿಸಬೇಕು ಎಂದು ಜೆಸ್ಕಾಂ ಹೊಸಪೇಟೆ ನಗರ ಉಪವಿಭಾಗದ ಎಇಇ ತಿಳಿಸಿದ್ದಾರೆ.

# ಭದ್ರಾ ಜಲಾಶಯದಿಂದ ತುಂಗಭದ್ರಾ ನದಿಗೆ ನೀರು

## ಫೆ.18 ರಿಂದ ಫೆ23ರವರೆಗೆ ಪ್ರತಿ ದಿನ 500 ಕ್ಯೂಸೆಕ್ಸ್

### ಅನಧೀಕೃತ ಪಂಪ್‌ಸೆಟ್‌ಗಳಿಂದ ನೀರೆತ್ತುವುದಕ್ಕೆ ನಿಷೇಧ: ಡಿಸಿ

**ಹಂಪಿ ಟೈಮ್ಸ್ ಹೊಸಪೇಟೆ**

ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯ ವಾರ್ಷಿಕ ಕಾರ್ಣಿಕೋತ್ಸವ ಪ್ರಯುಕ್ತ ಭದ್ರಾ ಜಲಾಶಯದಿಂದ ತುಂಗಭದ್ರಾ ನದಿಗೆ ನೀರು ಹರಿಸುತ್ತಿದ್ದು ಅನಧಿಕೃತ ಪಂಪಸೆಟ್‌ಗಳನ್ನು ನಿಷೇಧಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಆದೇಶ ಹೊರಡಿಸಿದ್ದಾರೆ.



2023–24ನೇ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯ ವಾರ್ಷಿಕ ಕಾರ್ಣಿಕೋತ್ಸವ ಪ್ರಯುಕ್ತ ಭದ್ರಾ ಜಲಾಶಯದಿಂದ ತುಂಗಭದ್ರಾ ನದಿಗೆ ಫೆ. 18 ರಿಂದ ಫೆ23ರವರೆಗೆ ಪ್ರತಿ ದಿನ 500 ಕ್ಯೂಸೆಕ್ಸ್ ನಂತೆ (0.26 ಟಿ.ಎಂ.ಸಿ) ನೀರನ್ನು ಹರಿಸಲು ಅನುಮತಿ ನೀಡಿ ಆದೇಶವಾಗಿರುವ ಪ್ರಯುಕ್ತ ಸಾರ್ವಜನಿಕ ದೂರುಗಳ ಹಿನ್ನೆಲೆಯಲ್ಲಿ ನದಿ ದಂಡೆಯಲ್ಲಿ ಅಳವಡಿಸಿರುವ ಅನಧೀಕೃತ ಪಂಪ್‌ಸೆಟ್‌ಗಳಿಂದ ನೀರೆತ್ತುವುದನ್ನು ನಿಷೇಧಿಸುವುದು ಹಾಗೂ ಈ ಅವಧಿಯಲ್ಲಿ ನದಿ ಪಾತ್ರದಲ್ಲಿ ಸಾರ್ವಜನಿಕರು ತಿರುಗಾಡುವುದಾಗಲೀ, ಜನರು ಮತ್ತು ದನಕರುಗಳನ್ನು ನದಿಗೆ ಇಳಿಸುವುದಾಗಲಿ ಹಾಗೂ ನಿರ್ಮಾಣ ಕಾಮಗಾರಿಗಳನ್ನು ನದಿಯಲ್ಲಿ ನಡೆಸುತ್ತಿರುವುದು ಇತ್ಯಾದಿ ಚಟುವಟಿಕೆಗಾಗಿ ನದಿಗೆ ಇಳಿಯದಂತೆ ಸೂಚಿಸಿ ಆದೇಶ ಹೊರಡಿಸಿದ್ದಾರೆ.

ಈ ಆದೇಶವನ್ನು ಅನುಷ್ಠಾನಕ್ಕೆ ತರಲು ಅಗತ್ಯ ಕಟ್ಟುನಿಟ್ಟಿನ ಕ್ರಮಗಳನ್ನು ವಿಜಯನಗರ ಜಿಲ್ಲಾ ಪೊಲೀಸ್ ಅಧೀಕ್ಷಕರು ಹಾಗೂ ಹರಪ್ಪನಹಳ್ಳಿಯ ಸಹಾಯಕ ಆಯುಕ್ತರು ಜರುಗಿಸಬೇಕು ಎಂದು ಜಿಲ್ಲಾಧಿಕಾರಿಗಳು ಈ ಆದೇಶದಲ್ಲಿ ತಿಳಿಸಿದ್ದಾರೆ.

# ಶಿವಾಜಿ ಮಹಾರಾಜ್ ಸ್ವಾಭಿಮಾನಿ ರಾಷ್ಟ್ರಕ್ಕಾಗಿ ಹೋರಾಡಿದ ವ್ಯಕ್ತಿ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ:**

ಸ್ವಾಭಿಮಾನಿ ರಾಷ್ಟ್ರ ನಿರ್ಮಾಣಕ್ಕಾಗಿ ಹೋರಾಡಿ, ರಾಷ್ಟ್ರಭಕ್ತಿ ಮೆರೆದವರಲ್ಲಿ ಛತ್ರಪತಿ ಶಿವಾಜಿ ಮಹಾರಾಜ್‌ರು ಶ್ರೇಷ್ಠರಾಗಿದ್ದರು ಎಂದು ಮರಾಠ ಸಮುದಾಯದ ತಾಲೂಕು ಅಧ್ಯಕ್ಷ ಅವಿನಾಶ್ ಜಾಧವ್ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಮಿನಿ ವಿಧಾನ ಸೌಧದಲ್ಲಿ ತಾಲೂಕು ಆಡಳಿತದಿಂದ ಸೋಮವಾರ ಹಮ್ಮಿಕೊಂಡಿದ್ದ ಛತ್ರಪತಿ ಶಿವಾಜಿ ಮಹಾರಾಜ್‌ರವರ ಜಯಂತಿಯಲ್ಲಿ ಪಾಲ್ಗೊಂಡು ಮಾತನಾಡಿ, ಶಿವಾಜಿಯವರು, ಉತ್ತಮ ಆಡಳಿತ ನಡೆಸಿ ಇಂದಿಗೂ ಜನತೆಯ ಮನದಲ್ಲಿ ಉಳಿದಿದ್ದಾರೆ ಎಂದರು. ಪುರಸಭೆ ಸದಸ್ಯ ದೀಪಕ್ ಕಠಾರೆ ಮಾತನಾಡಿದರು. ಈ ವೇಳೆ ಮುಖಂಡರಾದ ಮೋಹನ್ ಸಾ, ಪ್ರಮೋದ್ ಮೇಘರಾಜ್, ಸಂತೋಷ್ ಪೂಜಾರ್, ಸುರೇಂದ್ರ, ಉತ್ತಂಗಿ ವೀರೇಂದ್ರ, ಕೊಟ್ರೇಶ್ ರೆಡ್ಡಿ, ಉಪ ತಹಸೀಲ್ದಾರ್ ಶಿವಕುಮಾರ್‌ಗೌಡ, ಸಿಬ್ಬಂದಿ ಗೋಪಾಲ್‌ಶೆಟ್ಟಿ, ನಾಗರಾಜ್ ಮಡ್ಡಿಕಟ್ಟಿ ಮುಂತಾದವರಿದ್ದರು.

# ಬಸವ ಮಾರ್ಗದಿಂದ ಲೇಸಿಯ ಮಗನೂ ಗಾಂಧಿಯಾಗಬಲ್ಲ

## ಸಮಾಜ ಸೇವಕ ಸಾಲಿ ಬಸವರಾಜ ಅಭಿಮತ



**ಹಂಪಿ ಟೈಮ್ಸ್ ಹೊಸಪೇಟೆ**

ಬಸವಣ್ಣನನ್ನು ನಾಡಿನ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ ಬೆನ್ನಲ್ಲೇ ನಾಡಿನ ಎಲ್ಲಡೆ ಬಸವ ಧರ್ಮದ ಪುನಶ್ಚೇತನಕ್ಕೆ ಹೋರಾಡಿದ ನೇತಾರರ ಜಯಂತಿಗಳು ಪ್ರಾಮುಖ್ಯತೆ ಪಡೆದುಕೊಂಡಿವೆ ಎಂದು ಸಮಾಜ ಸೇವಕ ಸಾಲಿ ಬಸವರಾಜ ಹೇಳಿದರು.

ರಾಷ್ಟ್ರ ಧರ್ಮ ದೃಷ್ಟಾರ ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪನವರ ಜಯಂತಿ ಮತ್ತು ಲಿಂಗೈಕ್ಯ ಡಾ.ಅಮರೇಶ್ವರ ಮತ್ತು ಲಿಂಗೈಕ್ಯ ಸುವರ್ಣಮ್ಮ ತಾಂಡೂರ್ ಅವರ ಸ್ಮರಣಾರ್ಥ ಇಷ್ಟಲಿಂಗ ಅಧ್ಯಯನ ಕೇಂದ್ರ ನಗರದಲ್ಲಿ ಏರ್ಪಡಿಸಿದ್ದ ದೇವದಾಸಿ ತಾಯಂದಿರ ಆಧ್ಯಾತ್ಮಿಕ ಸಬಲೀಕರಣ ಕಾರ್ಯಕ್ರಮವನ್ನು ಭಾನುವಾರ ಉದ್ಘಾಟಿಸಿ ಮಾತನಾಡಿದರು. ಬಸವಣ್ಣನವರ ವಚನಗಳು ಹರ್ಡೇಕರ ಮಂಜಪ್ಪನವರ ಬದುಕನ್ನೇ ಬದಲಾಯಿಸಿ ಅವರನ್ನು ಭಾರತದ ರಾಷ್ಟ್ರ ಧರ್ಮ ದೃಷ್ಟಾರರನ್ನಾಗಿ ರೂಪಿಸಿದವು. ಕರ್ನಾಟಕ ಏಕೀಕರಣದ ರುವಾರಿಯಾಗಿ ಕರ್ನಾಟಕದ ಗಾಂಧಿ ಎಂದೇ ಹೆಸರು ಗಳಿಸಿಕೊಂಡರು. >>4

# ಸಮಾಜಮುಖಿ ಬದುಕಿಗೆ ಎನ್‌ಎಸ್‌ಎಸ್ ಸಹಕಾರಿ

## ಸಖಿ ಸಂಸ್ಥೆಯ ನಿರ್ದೇಶಕಿ ಡಾ. ಎಂ ಭಾಗ್ಯಲಕ್ಷ್ಮಿ ಹೇಳಿಕೆ | 88 ಮುದ್ಲಾಪುರದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಶಿಬಿರ



**ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರೀಯ ಸೇವಾ ಯೋಜನೆಯು ಯುವಕರ ಸದೃಢ ವ್ಯಕ್ತಿತ್ವ ರೂಪಿಸುವಲ್ಲಿ ಸದಾ ಸಹಕಾರಿ ಎಂದು ಸಖಿ ಸಂಸ್ಥೆಯ ನಿರ್ದೇಶಕರಾದ ಡಾ. ಎಂ ಭಾಗ್ಯಲಕ್ಷ್ಮಿ ಹೇಳಿದರು.

ನಗರದ ಶ್ರೀ ಶಂಕರನ ಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನ ಘಟಕದಿಂದ 88 ಮುದ್ಲಾಪುರ ಡಾ.ಬಿ.ಆರ್. ಅಂಬೇಡ್ಕರ್ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಎನ್‌ಎಸ್‌ಎಸ್‌ನಲ್ಲಿ ಪಾಲ್ಗೊಳ್ಳುವುದರಿಂದ ಭಾವೈಕ್ಯತೆ, ಸೌಹಾರ್ದತೆಯನ್ನು ಹೆಚ್ಚಿಸುತ್ತದೆ. ಪರಸ್ಪರರನ್ನು ಅರಿತುಕೊಂಡು ಸಮಾಜಮುಖಿ ಬದುಕಿಗೆ ನಾಂದಿಯಾಗಲಿದೆ. ಯುವಜನತೆಯ ಭಾಗವಹಿಸುವಿಕೆಯು ಸಮುದಾಯದಲ್ಲಿ ಬದಲಾವಣೆ ಮತ್ತು ಹೊಸತನಕ್ಕೆ ನಾಂದಿ ಹಾಡುತ್ತದೆ ಎಂದರು.

ಶಿಬಿರ ಅಧಿಕಾರಿ ರಘುಪ್ರಸಾದ್. ಟಿ ಪ್ರಾಸ್ತಾವಿಕವಾಗಿ ಮಾತನಾಡಿ, ಒಂದು ವಾರಗಳ ಕಾಲ ನಡೆಯುವ ಕಾರ್ಯಕ್ರಮಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ಪ್ರಾಂಶುಪಾಲ ಕೆ.ಶಿವಪ್ಪ ಅಧ್ಯಕ್ಷತೆವಹಿಸಿ ಮಾತನಾಡಿ, ನಮ್ಮ ಕಾಲೇಜಿನಲ್ಲಿ ನಿರಂತರವಾಗಿ ಯುವಜನತೆಗೆ ಸಹಾಯಕವಾಗುವ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ ಇದರ ಸದುಪಯೋಗವನ್ನು ಎಲ್ಲಾ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಗ್ರಾಮೀಣ ಠಾಣೆಯ ಪಿಎಸ್‌ಐ ಸೂರ್ಯನಾರಾಯಣ್ ರವರು ತಮ್ಮ ಕಾಲೇಜು ದಿನಗಳಲ್ಲಿ ಎನ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ ದಿನಗಳನ್ನು ಮೆಲುಕು ಹಾಕಿ. ಯುವಕರು ಕಾನೂನಿನ ಜ್ಞಾನವನ್ನು ಪಡೆದು ಸಮಾಜದ ಅಭಿವೃದ್ಧಿಯಲ್ಲಿ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕಾನೂನಿನ ಅರಿವು ಮೂಡಿಸಿದರು.

ಎರಡನೇ ವಾರ್ಡಿನ ನಗರಸಭಾ ಸದಸ್ಯ ಜೀವರತ್ನಂ ಮಾತನಾಡಿ, ತಮ್ಮ ವಾರ್ಡಿನಲ್ಲಿ ಅನೇಕ ಸಮಸ್ಯೆಗಳನ್ನು ಬಗೆಹರಿಸಿದ್ದೇವೆ ಮತ್ತು ಎನ್‌ಎಸ್‌ಎಸ್ ಶಿಬಿರಕ್ಕೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಶಾಲೆಯ ಮುಖ್ಯೋಪಾಧ್ಯಾಯರಾದ ಪದ್ಮ ಲಕ್ಕಿ, ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಎಸ್ .ರಮೇಶ, ಎಸ್ ಡಿ ಎಂ ಸಿ ಅಧ್ಯಕ್ಷರಾದ ಲಕ್ಷ್ಮಿ ದೇವಿ ಮತ್ತು ಕಾಲೇಜಿನ ಎಲ್ಲಾ ಉಪನ್ಯಾಸಕರು ಹಾಜರಿದ್ದರು ಕನ್ನಡ ವಿಭಾಗದ ಡಾ.ರೇಖಾ ನಿರ್ವಹಿಸಿದರು ಮತ್ತು ಮುರುಳೀದರ.ಬಿ.ಕೆ. ವಂದಿಸಿದರು.




## ವಚನ ಅರಿವು

### ಸ್ವಭಾವ ಶುದ್ಧವಾಗಬೇಕು

**ಅಂದಣವನೇರಿದ ಸೊಣಗನಂತೆ**
**ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು.**
**ಸುಡು, ಸುಡು, ಮನವಿದು ವಿಷಯಕ್ಕೆ ಹರಿವುದು,**
**ಮೃಡ ನಿಮ್ಮನನುದಿನ ನೆನೆಯಲೀಯದು.**
**ಎನ್ನೊಡೆಯ ಕೂಡಲಸಂಗಮದೇವಾ**
**ನಿಮ್ಮ ಚರಣವ ನೆನೆವಂತೆ ಕರುಣಿಸು**
**ಸೆರಗೊಡ್ಡಿ ಬೇಡುವೆ, ನಿಮ್ಮ ಧರ್ಮ.**

**– ಬಸವಣ್ಣ**

ಈ ವಚನದಲ್ಲಿ ಬಸವಣ್ಣ ಕೆಟ್ಟ ಮನಸ್ಥಿತಿಯ ಮನುಷ್ಯರನ್ನು ಪಲ್ಲಕ್ಕಿ ಏರಿದ ನಾಯಿಯ ಕೆಟ್ಟ ಸ್ವಭಾವಕ್ಕೆ ಹೋಲಿಸುತ್ತಾನೆ. ಮನುಷ್ಯ ದೊಡ್ಡ ವ್ಯಕ್ತಿಯೆಂದು ಅನ್ನಿಸಿಕೊಳ್ಳಬಹುದು. ಆದರೆ ದೊಡ್ಡ ವ್ಯಕ್ತಿಯಾಗಲು ಅವನ ಶುದ್ಧ ವ್ಯಕ್ತಿತ್ವ ಮುಖ್ಯವಾಗುತ್ತದೆ. ನಡೆನುಡಿ ಒಂದಾಗಿ, ವ್ಯಕ್ತಿತ್ವವನ್ನು ಶುದ್ಧವಾಗಿಟ್ಟುಕೊಂಡು ಬದುಕಿದರೆ ಅವನು ತಾನಾಗಿಯೇ ಒಳ್ಳೆಯ ವ್ಯಕ್ತಿಯಾಗುತ್ತಾನೆ.

ಇದೊಂದು ಅಂತರಂಗವನ್ನು ಶುದ್ಧವಾಗಿಸಿಕೊಳ್ಳುವ ಪ್ರಜ್ಞೆಯ ವಚನ. ತನ್ನ ಆತ್ಮ ವಿಮರ್ಶೆ ಮಾಡಿಕೊಂಡರೆ, ವ್ಯಕ್ತಿ ತನ್ನ ತಪ್ಪನ್ನು ತಿಳಿದುಕೊಂಡು ತನ್ನ ಮನವನ್ನು ತೊಳೆದುಕೊಳ್ಳಬಹುದು. ಸಮಾಜದಲ್ಲಿ ವ್ಯಕ್ತಿಗಳು ಗುರು, ಮಠ, ಪೀಠ, ರಾಜಕಾರಣಿ, ಮುಖ್ಯಸ್ಥ, ಯಜಮಾನ, ನಾಯಕ, ಅನುಭಾವಿ ಹೀಗೆ ಯಾವುದೇ ಮುಖ್ಯಸ್ಥಾನವನ್ನು ಅಲಂಕರಿಸಿದವರೂ ತಮ್ಮ ಮನಸ್ಸಿನಲ್ಲಿ ಆಸೆ, ಆಮಿಷ, ಕಾಮಾದಿ ಬಯಕೆಗಳನ್ನು ತುಂಬಿಕೊಂಡಿರುತ್ತಾರೆ. ಇಂತಹವರು ಪಲ್ಲಕ್ಕಿಯಲ್ಲಿ ಕುಂತಿರುವ ನಾಯಿ ಹೊಲಸು ಕಂಡ ತಕ್ಷಣ ಹೋಗಿ ಬಾಯಿ ಹಾಕುವಂತೆ ಮನುಷ್ಯ ಮೋಹ, ಭ್ರಾಂತಿಗೆ ಒಳಗಾಗಿ ತನ್ನ ಕೆಟ್ಟ ಸ್ವಭಾವದಲ್ಲಿ ಬದುಕುತ್ತಿರುತ್ತಾನೆ. ಇಂತಹ ಮನಸ್ಥಿತಿಯನ್ನು ಸುಟ್ಟು ಅಂತರಂಗವನ್ನು ಶುದ್ಧವಾಗಿಟ್ಟುಕೊಳ್ಳಬೇಕು. ಮನಸ್ಸಿನಲ್ಲಿ ಮೋಹ ತುಂಬಿಕೊಂಡಿದ್ದರೆ ತನ್ನ ತಾನು ಅರಿತುಕೊಳ್ಳುವುದು ಸಾಧ್ಯವಿಲ್ಲ. ನಿನ್ನ ಧ್ಯಾನದ ಮೂಲಕ ಸದಾ ಜಾಗೃತವಾಗಿರಿಸು ಎಂದು ಅರಿವಿನ ಶಿವನಲ್ಲಿ ಪ್ರಾರ್ಥಿಸುತ್ತಾನೆ ಬಸವಣ್ಣ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ರಾಜ್ಯ ಸರ್ಕಾರದೊಂದಿಗೆ 2300 ಕೋಟಿ ರೂ. ಹೂಡಿಕೆಗೆ ರಾಜ್ಯ ಸರ್ಕಾರದೊಂದಿಗೆ ಒಡಂಬಡಿಕೆಗೆ ಸಹಿ



ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಮ್ಮುಖದಲ್ಲಿ ಟಾಟಾ ಸಮೂಹ ಸಂಸ್ಥೆಯ ಏರ್ ಇಂಡಿಯಾ ಹಾಗೂ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ನವರು ರಾಜ್ಯದಲ್ಲಿ ಒಟ್ಟು 2300 ಕೋಟಿ ರೂಪಾಯಿ ಹೂಡಿಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದೊಂದಿಗೆ ಒಡಂಬಡಿಕೆಗೆ ಸೋಮವಾರ ಸಹಿ ಮಾಡಿದರು. ಈ ಸಂದರ್ಭದಲ್ಲಿ ಕೈಗಾರಿಕಾ ಸಚಿವ ಎಂ. ಬಿ.ಪಾಟೀಲ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯಲ್, ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ಟಾಟಾ ಸಮೂಹದ ನಿಪುಣ್ ಅಗರ್ ವಾಲ್ , ಸುಕರಣ್ ಸಿಂಗ್, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿ., ಸಿಇಒ ಹರಿ ಮರಾರ್ ಉಪಸ್ಥಿತರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 9448633038

# ವಿಚ್ಛೇದನ

ವಿಚಿತ್ರವಾದರೂ ಸತ್ಯ... ಪರಸ್ಪರ ಗಂಡು-ಹೆಣ್ಣುಗಳು, ಪಾಲಕರು ಮತ್ತು ಹಿರಿಯರು... ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಪಾರಿವಾರಿಕವಾಗಿ ಪರಸ್ಪರ ಹೊಂದಾಣಿಕೆ ಸಾಧ್ಯ ಎಂಬುದನ್ನು ಪರಿಶೀಲಿಸಿ, ಒಪ್ಪಿ ಮಾಡಿರುವ ವಿವಾಹದ ಬಂಧವನ್ನು ಕೋರ್ಟ್ನ ಮೂಲಕ ಮುರಿದು ಹಾಕುವುದು ಅಥವಾ ಬೇರ್ಪಡಿಸುವುದು ವಿಚ್ಛೇದನ.

**ಹಾಗಾದರೆ ಸಂಬಂಧಗಳು ಹಳಸುವುದು ಯಾವಾಗ?**

* ಪರಸ್ಪರ ಒಬ್ಬರಿಗೊಬ್ಬರು ಸಮಯ, ಪ್ರೀತಿ ನೀಡದೆ ಇದ್ದಾಗ ಮತ್ತು ವಿಶ್ವಾಸ, ನಂಬಿಕೆಯನ್ನು ಉಳಿಸಿಕೊಳ್ಳದೆ ಹೋದಾಗ

* ದಾಂಪತ್ಯ ಎಂಬುದು ಎರಡು ಜೀವಗಳು ಒಟ್ಟಾಗಿ ಜೊತೆಯಾಗಿ ಸಾಗಿಸಬಹುದಾದ ಸುದೀರ್ಘ ಸಂಬಂಧ ಮತ್ತು ಆ ಸಂಬಂಧದಲ್ಲಿ ಪರಸ್ಪರ ಕುಂದು ಕೊರತೆಗಳನ್ನು ಅರಿಯುವುದು ಮತ್ತು ಕುಂದು ಕೊರತೆಗಳ ಸಮೇತ ಅವರನ್ನು ಸ್ವೀಕರಿಸದೇ ಇರುವುದು.

* ಇತ್ತೀಚೆಗಿನ ಮಾಧ್ಯಮಗಳ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಕಂಡುಬರುವ ಅತಿರಂಜಿತವಾದ ಭ್ರಾಮಕ ಬದುಕಿನ ಚಿತ್ರಣಗಳು ಮತ್ತು ಅದರ ಪರಿಣಾಮವಾಗಿ ಸ್ವೇಚ್ಛೆಯ ಜೀವನವನ್ನು ಬಯಸುವ ಯುವಜನ.

* ಪರಸ್ಪರ ಅರಿವಿನ ಮತ್ತು ಹೊಂದಾಣಿಕೆಯ ಕೊರತೆ, ಸಂಬಂಧಗಳಲ್ಲಿ ತಲೆದೋರುವ ಅಹಂ

* ಮದುವೆ ಎಂಬ ಸುಮಧುರ ಮತ್ತು ಸುಭದ್ರ ಸಾಮಾಜಿಕ ವ್ಯವಸ್ಥೆಯ ಕುರಿತಾದ ಶಿಥಿಲ ತಿಳುವಳಿಕೆಗಳು.

* ಇನ್ನೂ ಹಲವು ಬಾರಿ ಮಾನಸಿಕ ಮತ್ತು ದೈಹಿಕ ಹಲ್ಲೆಗಳು.

ಮಾತೆತ್ತಿದರೆ ನಾನು ನಿನಗೆ ಡೈವೋರ್ಸ್ ಕೊಟ್ಟುಬಿಡುತ್ತೇನೆ ಎಂದು ಕೂಗಾಡುವ ದಂಪತಿಗಳು ಮುಖ್ಯವಾಗಿ ಅರಿಯಬೇಕಾಗಿರುವುದು
ವಿಚ್ಛೇದನವನ್ನು ದಂಪತಿಗಳು ಪರಸ್ಪರ ಒಬ್ಬರಿಗೊಬ್ಬರು ಕೊಡುವುದಲ್ಲ!! ವಿಚ್ಛೇದನವನ್ನು ಕೊಡಬೇಕೇ?? ಬೇಡವೆ?? ಎಂಬುದನ್ನು ತೀರ್ಮಾನ ಮಾಡುವುದು ನ್ಯಾಯಾಲಯ. ದಂಪತಿಗಳು ತಮ್ಮ ವಿವಾಹ ಸಂಬಂಧದ ವಿಚ್ಛೇದನಕ್ಕೆ ಕೋರ್ಟಿನ ಮೊರೆ ಹೋಗಬೇಕು, ವಿಚ್ಛೇದನಕ್ಕೆ ಸಮಂಜಸವಾದ ಕಾರಣಗಳನ್ನು ಕೋರ್ಟ್ನ ಮುಂದೆ ಇಡಬೇಕು ಮತ್ತು ಅದನ್ನು ಪರಿಶೀಲಿಸಿದ ಕೋರ್ಟ್ ಕೌಟುಂಬಿಕ ಸಲಹೆಗಳಿಗಾಗಿ ಮತ್ತೆ ಆದೇಶ ನೀಡುತ್ತದೆ. ಪರಸ್ಪರ ಹೊಂದಾಣಿಕೆ ಸಾಧ್ಯವೇ ಇಲ್ಲ ಎಂದು ಮನವರಿಕೆಯಾದಾಗ ಮಾತ್ರ ಕೋರ್ಟ್ ವಿಚ್ಛೇದನಕ್ಕೆ ಆದೇಶ ನೀಡಬಹುದು, ಇಲ್ಲವೇ ಮತ್ತೆ ಹೊಂದಾಣಿಕೆಯ ಮೂಲಕ ಕೌಟುಂಬಿಕ ಜೀವನ ನಡೆಸಲು ಹೇಳಬಹುದು. ಆದರೆ ವಿಚ್ಛೇದನದ ಈ ಪ್ರಕ್ರಿಯೆ ಕೆಲವೊಮ್ಮೆ ಅನೇಕ ವರ್ಷಗಳ, ದಶಕಗಳ ಕಾಲ ಜರುಗುತ್ತದೆ.

**ವಿಚ್ಛೇದನದ ಪರಿಣಾಮಗಳು**

* ಆರ್ಥಿಕವಾಗಿ ಸಬಲಳಲ್ಲದ ಪತ್ನಿಗೆ ವಿಚ್ಛೇದನದ ನಂತರ ಆಕೆಯ ಜೀವನ ನಿರ್ವಹಣೆಗೆ ಪರಿಹಾರವಾಗಿ ಆಸ್ತಿ ಮತ್ತು ಹಣವನ್ನು ನೀಡಬೇಕಾಗುತ್ತದೆ. ತನ್ನ ಮತ್ತು ತನ್ನ ಮಕ್ಕಳ ಜೀವನಕ್ಕೆ ಬೇಕಾಗುವ ಹಣಕಾಸಿನ ವ್ಯವಸ್ಥೆಯನ್ನು ಮಹಿಳೆ ಮಾಡಿಕೊಳ್ಳಲೇ ಬೇಕಾಗುತ್ತದೆ. ಸಾಮಾಜಿಕವಾಗಿಯೂ ಆಕೆ ಕೆಟ್ಟ ಮಾತು, ಅವಮಾನ ಮತ್ತು ಕುಹಕಗಳಿಗೆ ಬಲಿಯಾಗಬೇಕಾಗುತ್ತದೆ.

* ಗಂಡ ಹೆಂಡತಿಯ ಜಗಳದಲ್ಲಿ ಕೂಸು ಬಡವಾಯಿತು ಎಂಬಂತೆ.......
ಪತಿ ಪತ್ನಿಯರ ನಡುವಿನ ವಿಚ್ಛೇದನದ ಪ್ರಕ್ರಿಯೆಯಲ್ಲಿ ದಂಪತಿಗಳಿಗೆ



ಮಕ್ಕಳಿದ್ದರೆ ಮುಂದೆ ಆ ಮಕ್ಕಳನ್ನು ಪೋಷಿಸುವ ಜವಾಬ್ದಾರಿಯನ್ನು ಯಾರು ಹೊರಬೇಕು ಎಂಬುದು ಕೂಡ ಮುಖ್ಯ ಕಾರಣವಾಗುತ್ತದೆ.
*ಪತಿ ಪತ್ನಿಯರ ನಡುವಿನ ಬಿರುಕು ಮತ್ತು ವಿಚ್ಛೇದನದ ಪರಿಣಾಮ ಮಗುವಿನ ಮೇಲೆ ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ಬೀರುವ ದುಷ್ಪರಿಣಾಮವಂತೂ ಘೋರ. ಮಗು ಮಾನಸಿಕವಾಗಿ ಅಭದ್ರತೆಯಿಂದ ಬಳಲುತ್ತದೆ.

* ಮದುವೆ ಎಂಬ ವ್ಯವಸ್ಥೆ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಕೌಟುಂಬಿಕವಾಗಿ ಪರಸ್ಪರ ಪತಿ-ಪತ್ನಿಯರನ್ನು ಒಂದು ಸುಮಧುರ ಬಂಧನದಲ್ಲಿ ಬೆಸೆದಿರುತ್ತದೆ. ಆದರೆ ಪರಸ್ಪರ ಕುಂದು ಕೊರತೆಗಳ ಅರಿವು, ನಂಬಿಕೆ ವಿಶ್ವಾಸ ಮತ್ತು ಪ್ರೀತಿಯ ಬಂಧನವಿಲ್ಲದೆ ಹೋದಾಗ ಈ ವ್ಯವಸ್ಥೆ ಕುಸಿದು ಬೀಳುತ್ತದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

**ವಿಚ್ಛೇದನದ ಅವಶ್ಯಕತೆ....**

ಋಣಾನುಬಂಧ ರೂಪೇಣ
ಪಶು ಪತ್ನಿ ಸುತ ಆಲಯ
ಎಂಬ ಪ್ರಾಚೀನ ಆದರೆ ಎಂದೆಂದಿಗೂ ಪ್ರಸ್ತುತವಾಗಿರುವ ನಮ್ಮ ಭಾರತೀಯ ವ್ಯವಸ್ಥೆಯಲ್ಲಿ ತೀರ ಅನಿವಾರ್ಯವಲ್ಲದ ಹೊರತು ವಿಚ್ಛೇದನ ಅಪೇಕ್ಷಣೀಯವಲ್ಲ.

ನಮ್ಮ ತಂದೆ-ತಾಯಿಗೆ, ಅಣ್ಣ-ತಮ್ಮಂದಿರಿಗೆ, ಅಕ್ಕ-ತಂಗಿಯರಿಗೆ, ಸಂಬಂಧಿಗಳಿಗೆ, ಮಕ್ಕಳಿಗೆ ನಾವೆಂದೂ ವಿಚ್ಛೇದನ ಕೊಡುವುದಿಲ್ಲ... ಬದಲಾಗಿ ಅವರ ಎಲ್ಲಾ ಕುಂದು ಕೊರತೆಗಳ, ಅತಿರೇಕಗಳ ಹೊರತಾಗಿಯೂ ಅವರಿರುವಂತೆಯೇ ಅವರನ್ನು ಸ್ವೀಕರಿಸುತ್ತೇವೆ....
ದಾಂಪತ್ಯವೂ ಹಾಗೆಯೇ. ಕ್ಷುಲ್ಲಕ ಕಾರಣಗಳು, ಅರ್ಥವಿಲ್ಲದ ಅನುಮಾನಗಳು, ಅವಮಾನಗಳು ನಿಂದನೆಗಳು ದಾಂಪತ್ಯದ ಸುಮಧುರಬಂಧನವನ್ನು ದುರ್ಬಲಗೊಳಿಸುತ್ತವೆ.

ಒಂದು ಸುಂದರ ದಾಂಪತ್ಯ ನಿಂತಿರುವುದು ಪರಸ್ಪರ ಪ್ರೀತಿ, ವಿಶ್ವಾಸ, ನಂಬಿಕೆ ಮತ್ತು ಜವಾಬ್ದಾರಿಯ ತಳಹದಿಯ ಮೇಲೆ. ಒಂದು ವಿಚ್ಛೇದನದಿಂದ ಮುಂದಿನ ಜೀವನ ಸರಳವಾಗುತ್ತದೆ ಎಂಬ ನಂಬಿಕೆ ಇದ್ದರೆ ಅದು ಸುಳ್ಳು ಎಂಬುದು ನೂರಕ್ಕೆ 90ರಷ್ಟು ಜನರ ಅಭಿಪ್ರಾಯ ಮತ್ತು ಭಾರತದಂತಹ ಸಾಂಪ್ರದಾಯಿಕ ರಾಷ್ಟ್ರದಲ್ಲಿ ಅದು ಕಷ್ಟ ಸಾಧ್ಯವಾದದ್ದು ಕೂಡ.

ದಾಂಪತ್ಯ ದ್ರೋಹ, ಅತಿಯಾದ ಮಾನಸಿಕ ಮತ್ತು ದೈಹಿಕ ಹಿಂಸೆ, ವರದಕ್ಷಿಣೆ ಕಿರುಕುಳದಂತಹ ಸಾಮಾಜಿಕ ಪಿಡುಗುಗಳು, ಕೌಟುಂಬಿಕ ಹಿಂಸೆಯ ಮುಂತಾದ ಪ್ರಕರಣಗಳಲ್ಲಿ ಪರಿಸ್ಥಿತಿಯು ದುರ್ಬರಗೊಳ್ಳದಿರಲು ಮತ್ತು ಸುರಕ್ಷತೆಯ ದೃಷ್ಟಿಯಿಂದ ವಿಚ್ಛೇದನ ಅನಿವಾರ್ಯ ಮತ್ತು ಅವಶ್ಯಕವೂ ಹೌದು. ಆದರೆ ಸಣ್ಣ ಪುಟ್ಟ ಬಗೆಹರಿಸಬಹುದಾದ ಜಗಳಗಳು, ಕಿರಿಕಿರಿಗಳು ವಿಚ್ಛೇದನಕ್ಕೆ ದಾರಿ ತೋರಿಸಬಾರದು.

ದಾಂಪತ್ಯ ಎಂಬುದು ಪ್ರೀತಿ, ವಿಶ್ವಾಸ, ನಂಬಿಕೆ ಆದರಗಳನ್ನು ಪರಸ್ಪರ ಕೊಟ್ಟು ತೆಗೆದುಕೊಳ್ಳುವ ಕ್ರಿಯೆ. ಇಲ್ಲಿ ಸೋತು ಗೆಲ್ಲಬೇಕು ಗೆದ್ದು ಸೋಲಬೇಕು. ತಮ್ಮ ಸುತ್ತ ಕಟ್ಟಿರುವ ಅಹಮ್ಮಿಕೆಯ ಗೋಡೆಯನ್ನು ತಾವೇ ಒಡೆಯಬೇಕು ದಂಪತಿಗಳಿಬ್ಬರು ಪರಸ್ಪರರ ಪ್ರೀತಿಗೆ ಸೋತು, ವಿಶ್ವಾಸವನ್ನು ಗೆದ್ದು ಜೀವನ ಸಾಗಿಸಬೇಕು. ಒಬ್ಬರನ್ನೊಬ್ಬರು ಗೆಲ್ಲಿಸಬೇಕು. ಗೆಲ್ಲಬೇಕು.

# ಓದು ಬಲು ಸರಳ

ಹದಿಹರೆಯವೇ ಹಾಗೆ,ಯಾರೇ ಬುದ್ಧಿ ಮಾತುಗಳನ್ನು ಹೇಳಿದರೆ ಇಷ್ಟಪಡದ ವಯಸ್ಸು.ಅದರಲ್ಲೂ ಪರೀಕ್ಷೆ ಹತ್ತಿರವಿರುವಾಗ ಕೆಲವೊಂದು ಸಲಹೆಗಳು ನೀಡಿದಾಗ ಸಿಟ್ಟು ಬರುವುದು ಸಹಜ.
ನಿಖರವಾಗಿ ನಿಮ್ಮ ಮುಂದಿರುವ ಗುರಿ ನೆನಪಿಸಿಕೊಂಡರೆ ಮೊಬೈಲ್, ಟಿ.ವಿಯಂತಹ ಆಕರ್ಷಣೆಯಿಂದ ದೂರ ಉಳಿದು ಓದಿನ ಮೇಲೆ ಏಕಾಗ್ರತೆ ಸಾಧಿಸಬಹುದು.
ವಿದ್ಯಾರ್ಥಿ ದೆಸೆಯಲ್ಲಿ 10ನೇ ಮತ್ತು 12ನೇ ತರಗತಿಗಳು ಜೀವನದ ಪ್ರಮುಖ ಘಟ್ಟಗಳು ಈ ಸಂದರ್ಭದಲ್ಲಿ ಸಮಯ ಹಾಳು ಮಾಡಿಕೊಂಡು, ಓದಿನಲ್ಲಿ ಆಸಕ್ತಿ ಕಳೆದುಕೊಂಡರೆ ಮುಂದಿನ ದಿನಗಳಲ್ಲಿ ಇದಕ್ಕೆ ಬೆಲೆ ಕಟ್ಟಬೇಕಾಗುತ್ತದೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ನೀವು "ಪರೀಕ್ಷೆಗಳಿಗೆ ವೇಗವಾಗಿ ಕಲಿಯುವುದು ಹೇಗೆ" ಎಂದು ಆಲೋಚನೆ ಮಾಡುತ್ತಿದ್ದರೆ ಈ ಕೆಳಕಂಡ ಮಾರ್ಗಗಳ ಅನುಸರಣೆ ಅನುಕೂಲವಾಗಬಹುದು.

**1–ನೆನಪಿಟ್ಟುಕೊಳ್ಳುವ ಕೌಶಲ್ಯ:–**
ಪ್ರತಿಯೊಬ್ಬರೂ ತಮ್ಮ ಮಾಹಿತಿಯನ್ನು ನೆನಪಿಟ್ಟುಕೊಳ್ಳುವ ವಿಧಾನವನ್ನು ವೈಯಕ್ತಿಕವಾಗಿ ಹೊಂದಿದ್ದಾರೆ, ಉದಾ-ಟೇಬಲ್‌ನ ಮೊದಲ ಅಕ್ಷರವನ್ನು ಸಂಯೋಜಿಸುವುದು ಅಥವಾ ಸಂಗೀತದೊಂದಿಗೆ ವಿಷಯಗಳನ್ನು ಸಂಯೋಜಿಸುವುದು.
ನೀವು ಯಾವ ರೀತಿಯಾಗಿ ನೆನಪಿಟ್ಟುಕೊಳ್ಳುತ್ತೀರಿ ಎಂಬುದನ್ನು ಕಂಡುಕೊಂಡು ರೂಡಿಸಿಕೊಳ್ಳಬೇಕು.

**2– ಪರಿಕಲ್ಪನೆಗಳ ಮೇಲೆ ಕೇಂದ್ರೀಕರಿಸಿ**
ಅಧ್ಯಾಯವನ್ನು ಕಲಿಯುವುದು ಅದರ ಬಗ್ಗೆ ನಿಮಗೆ ತಿಳಿದಿದ್ದರೆ ಮಾತ್ರ ಉಪಯೋಗವಾಗುತ್ತದೆ.
ವಿಷಯಗಳನ್ನು ವಿಸ್ತಾರ ಮಾಡುವ ಬದಲು ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಗಮನಾರ್ಹ ಸಮಯವನ್ನು ಹೂಡಿಕೆ ಮಾಡಿ.
ಸಂಬಂಧಿತ ಪ್ರಶ್ನೆಗಳನ್ನು ಪರಿಹರಿಸಿ.

**3– ಸಮಯ ನಿರ್ವಹಣೆ**
ನೀವು ವೇಳಾಪಟ್ಟಿಯನ್ನು ತಯಾರಿಸಬಹುದು ಮತ್ತು ಸಿದ್ಧತೆಗಳಉದ್ದಕ್ಕೂಅದನ್ನುಉಪಯೋಗಿಸಬಹುದು.
ನಿಮ್ಮ ಅಧ್ಯಯನವನ್ನು ಟ್ರ್ಯಾಕ್‌ನಲ್ಲಿ ಇರಿಸಿಕೊಳ್ಳಲು ಇದು ನಿಮಗೆ ಸಹಾಯ ಮಾಡುತ್ತದೆ.

**4–ಗುಂಪು ಅಧ್ಯಯನ**
ಗುಂಪು ಅಧ್ಯಯನ ಮಾಡುವುದು ಸಹ ಮನಸ್ಸನ್ನು ಹೊಂದಲು ಒಳ್ಳೆಯದು.
ನೀವು ಅವರ ಸಮಸ್ಯೆಗಳನ್ನು ಪರಿಹರಿಸಬಹುದು ಮತ್ತು ನಿಮ್ಮ ಸಂದೇಹಗಳನ್ನು ಅವರು ಪರಿಹರಿಸಬಹುದು.

**5– ನೀರಿನ ಸೇವನೆ**
ನಿರ್ಜಲೀಕರಣವು ನಮ್ಮ ಮೆದುಳಿನ ಒಟ್ಟಾರೆ ಸಂಸ್ಕರಣಾ ಶಕ್ತಿಯನ್ನು ನಿಧಾನಗೊಳಿಸುತ್ತದೆ ಎಂದು ಅಧ್ಯಯನಗಳು ಸೂಚಿಸುತ್ತವೆ.
ಆದ್ದರಿಂದ,ನಿಮ್ಮ ನೀರಿನ ಸೇವನೆಯನ್ನು ಹೆಚ್ಚಿಸಿ ಅಥವಾ ಪ್ರತಿದಿನ ಕನಿಷ್ಠ ಏಳು ಗ್ಲಾಸ್ ನೀರನ್ನು ಸೇವಿಸಲು ಪ್ರಯತ್ನಿಸಿ.




**6–ಆರೋಗ್ಯಕರ ಆಹಾರ ಸೇವನೆ**
ಉತ್ತಮ ಆಹಾರ ಪದ್ಧತಿಯು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸುಧಾರಿಸುತ್ತದೆ.
ಪೌಷ್ಟಿಕಾಂಶ ಮತ್ತು ಮೊಟ್ಟೆ ಅಥವಾ ಒಮೆಗಾ-3 ಕೊಬ್ಬಿನಾಮ್ಲಗಳಂತಹ ಪ್ರೋಟೀನ್‌ಗಳಿಂದ ಸಮೃದ್ಧವಾಗಿರುವ ಸಮತೋಲಿತ ಆಹಾರವನ್ನು ನಿಮ್ಮ ದಿನಚರಿಯಲ್ಲಿ ಸೇರಿಸಿ.

**7– ಉತ್ತಮ ನಿದ್ರೆ**
ಉತ್ಪಾದಕ ಅಧ್ಯಯನವನ್ನು ಮಾಡಲು ಸಕ್ರಿಯ,ತಾಜಾ ಮತ್ತು ಶಕ್ತಿಯುತ ಮನಸ್ಸು ಅಗತ್ಯವಿದೆ.
ಕನಿಷ್ಠ ಎಂಟು ಗಂಟೆಗಳ ನಿದ್ದೆ ತೆಗೆದುಕೊಳ್ಳಿ.

**8– ವ್ಯಾಯಾಮ**
ಚುರುಕಾದ ಮತ್ತು ವೇಗವಾಗಿ ಅಧ್ಯಯನ ಮಾಡುವುದು ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯದೊಂದಿಗೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ.
ದಿನನಿತ್ಯ ಸಾಧ್ಯವಾಗದಿದ್ದರೆ ವಾರದಲ್ಲಿ ಮೂರು ಬಾರಿ ವ್ಯಾಯಾಮ ಅಥವಾ ಯೋಗಾಸನ ಮಾಡಲು ಪ್ರಯತ್ನಿಸಿ ಜೊತೆ ಜೊತೆಗೆ ಪ್ರತಿದಿನದ 5 ರಿಂದ 10 ನಿಮಿಷಗಳ ಧ್ಯಾನ ಬಹಳ ಉಪಯೋಗಕಾರಿಯಾಗಿದೆ.

**9– ಆಲಸ್ಯವನ್ನು ನಿಲ್ಲಿಸಿ**
ಓದುವುದನ್ನು ತಪ್ಪಿಸುವುದು ಅಥವಾ ಅವುಗಳನ್ನು ನಾಳೆಗೆ ಬಿಡುವುದು ಸ್ಮಾರ್ಟ್ ಅಧ್ಯಯನದ ಕಡೆಗೆ ನಿಮ್ಮ ದೊಡ್ಡ ಶತ್ರುವಾಗಿದೆ.
ನಿಮ್ಮ ಮನಸ್ಸನ್ನು ಸಿದ್ಧಪಡಿಸಿ ಮತ್ತು ನಿಯಮಿತ ಅಧ್ಯಯನಗಳನ್ನು ಮಾಡಿ.

**10– ಬಿ ಪಾಸಿಟಿವ್**
ನಿಮ್ಮ ತಯಾರಿಯ ಉದ್ದಕ್ಕೂ ಧನಾತ್ಮಕವಾಗಿ ಯೋಚಿಸುವುದು ನಿಮ್ಮ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.
ನಿಮ್ಮನ್ನು ಪ್ರೋತ್ಸಾಹಿಸುವ ಜನರ ಸಹವಾಸದಲ್ಲಿರಿ ಮತ್ತು ಎಲ್ಲಾ ನಕಾರಾತ್ಮಕತೆಯಿಂದ ದೂರವಿರಿ.

ಹೊಸ ಹೊಸ ಯೋಜನೆಗಳು, ಮಾರ್ಗೋಪಾಯಗಳು ಲಭ್ಯವಿದ್ದರೂ ಸಹ ತಮ್ಮನ್ನು ಸಂಪೂರ್ಣವಾಗಿ ಶಿಕ್ಷಕರು ಮತ್ತು ಪೋಷಕರು ಗಮನಿಸುತ್ತಾರೆ. ಅವರು ನಿಮಗೆ ಸರಿಯಾದ ಮಾರ್ಗೋಪಾಯಗಳನ್ನು ಸೂಚಿಸುತ್ತಾರೆ ಅವರೊಂದಿಗೆ ಮುಕ್ತವಾಗಿ ಚರ್ಚಿಸಿ,ಅವರ ಸಲಹೆಗಳನ್ನು ಸ್ವೀಕರಿಸಿ ಅಳವಡಿಸಿಕೊಳ್ಳಿ. ನಿಮ್ಮ ಗುರಿಯ ಸ್ಪಷ್ಟತೆ ಇದ್ದಾಗ ನೀವು ಸರಿಯಾದ ದಾರಿಯಲ್ಲಿಯೇ ಸಾಗುತ್ತಿರಿ. ಯಾವುದೇ ಭಯ,ಖಿನ್ನತೆಗೆ ಒಳಗಾಗದೆ ಭರವಸೆಯಿಂದ ಮುನ್ನಡೆಯಿರಿ ತಕ್ಷಣದ ಬದಲಾವಣೆಗಳಿಂದ ತುಸು ಎಚ್ಚರವಯಿಸಿ. ದೀರ್ಘಕಾಲದ ದೈಹಿಕ ಮತ್ತು ಮಾನಸಿಕ ತೊಂದರೆಗಳಿಂದ ಬಳಲುತ್ತಿದ್ದರೆ ಪೋಷಕರಿಗೆ ತಿಳಿಸಿ ವೈದ್ಯರ ಮಾರ್ಗದರ್ಶನ ಪಡೆದುಕೊಳ್ಳಿ.

## ಕವಿ ಮನಸು

### ಬೆಳಗಾಯಿತು ಬೆಳಗು ........!

ಬಾಳೆಂಬ ಬುತ್ತಿಯಲಿ ಸೋಲು
ಗೆಲುವುಗಳನ್ನುಂಡ ಈ ಬಾಳಲ್ಲಿ
ಬೆಳಗಾಯಿತು ಬೆಳಗು......!

ಭೂಮಿಗೆ ಗಮ ನೀಡುವ ಮೊದಲ ಮಳೆ,
ಚೈತ್ರ ಮಾಸದ ಚಿಗುರು ಸೇರಿ ಪ್ರಕೃತಿಯಲ್ಲಿ,
ಬೆಳಗಾಯಿತು ಬೆಳಗು.....!

ಹಸುಕಂದ ಕರೆದ ಅಮ್ಮಾ.....ಎಂಬ
ಮೊದಲ ಕರೆ
ಅಳಿಸಲಾಗದೆ ಅದಾಯಿತು ಅಮ್ಮನ
ಎದೆಯಲ್ಲಿ ಸೆರೆ,
ಆ ಕೂಗಿನಿಂದ ಮಹದಾನಂದ, ಅಂದೇ
ಆ ತಾಯಿಗೆ
ಬೆಳಗಾಯಿತು ಬೆಳಗು....!

ಹಂಪಿ ಟೈಮ್ಸ್ ದಿನಪತ್ರಿಕೆಯ
ಆರಂಭದಿಂದ ವಿಜಯನಗರ ಯುವ
ಕವಿಗಳಿಗೆ
ಬೆಳಗಾಯಿತು ಬೆಳಗು....!

ಹಸಿರಾಗಲಿ ಹಸನಾಗಲಿ ಕನ್ನಡದ ತೇರು
ಎಳೆದು,
ಕಲ್ಲುತೇರಿನಂದದಿ ಎಲ್ಲರ
ಮನೆ ಮನಗಳಲ್ಲಿ ಬೆಳಗಾಯಿತು ಬೆಳಗು....!
ಬೆಳಗಾಯಿತು ಬೆಳಗು.....!

– ಗೀತಾ ಎ.ಎಸ್.

### ನಿಷ್ಠೆ



ಮಾಡುವ ಕಾಯಕದಲ್ಲಿ ಇರಲಿ ಆಸಕ್ತಿ.
ಸಿಗದಿದ್ದರೂ ಸರಿ ಶ್ರಮಕ್ಕೆ ತಕ್ಕ ಸ್ತುತಿ.
ಸಾಧನೆ ದೊಡ್ಡದೋ ಚಿಕ್ಕದೋ
ಎಂದೂ ತೋರಬೇಡಿ ಆತ್ಮಸ್ತುತಿ.
ಮಾಡುವ ಕೆಲಸ ನಿಷ್ಠೆಯಿಂದ ಮಾಡಿದರೆ
ಸಿಕ್ಕೆ ಸಿಗುವುದು ಸಂತೃಪ್ತಿ.

**ಮಂಜುಶ್ರೀ ಮುರಳೀಧರ್.**
ತೋರಣಗಲ್ಲು, ಬಳ್ಳಾರಿ.

## ತುಂಗಭದ್ರಾ ನೀರಿನ ಮಟ್ಟ



| ಸೋಮವಾರ: 19–02–2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.77 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 165 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.268 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1609.67 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8682 ಕ್ಯುಸೆಕ್ |
| ಸಾಮರ್ಥ್ಯ | 36.929 ಟಿಎಂಸಿ |

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಪಾರದರ್ಶಕ ಆಡಳಿತ, ಶೈಕ್ಷಣಿಕ ಪ್ರಗತಿ ನಮ್ಮ ಗುರಿ

## ಯುವಕವೃಂದಕ್ಕೆ ಆಶೀರ್ವದಿಸಿ ಎಂದ ಆರ್.ಎಚ್.ಎಂ. ಚನ್ನಬಸಯ್ಯ । ಚುನಾವಣಾ ಪ್ರಚಾರಕ್ಕೆ ಚಾಲನೆ

**ಹಂಪಿ ಟೈಮ್ಸ್ ಬಳ್ಳಾರಿ**

ಉತ್ತಮ ಮತ್ತು ಪಾರದರ್ಶಕ ಆಡಳಿತ, ಶೈಕ್ಷಣಿಕ ಅಭಿವೃದ್ಧಿ, ಹೊಸ ಕೋರ್ಸ್‌ಗಳ ಪ್ರಾರಂಭ ನಮ್ಮ ಯುವಕವೃಂದದ ಗುರಿಯಾಗಿದೆ ಎಂದು ತಂಡದ ಆರ್.ಎಚ್.ಎಂ. ಚನ್ನಬಸಯ್ಯ ಹೇಳಿದರು.

ನಾಡಿನ ಪ್ರತಿಷ್ಠಿತ ವೀರಶೈವ ವಿದ್ಯಾವರ್ಧಕ ಸಂಘದ 2024–2027ರ ಅವಧಿಯ ನೂತನ ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆಗೆ ಸಜ್ಜಾಗಿರುವ 'ಯುವಕವೃಂದ'ದ ಅಭ್ಯರ್ಥಿಗಳು ಮತ್ತು ಬೆಂಬಲಿತ ಅಭಿಮಾನಿಗಳು ಒಟ್ಟಾಗಿ ತ್ರಿಕಾಲಜ್ಞಾನಿ ಮರಿಸ್ವಾಮಿ ಮಠದಲ್ಲಿ ಶ್ರೀಗಳಿಗೆ ಹಾಗೂ ದಾಸೋಹಿ ಶರಣ ಸಕ್ಕರೆ ಕರಡೀಶನ ಸಮಾಧಿಗೆ ಸೋಮವಾರ ವಿಶೇಷ ಪೂಜೆ ಸಲ್ಲಿಸುವ ಮೂಲಕ ಚುನಾವಣಾ ಪ್ರಚಾರ ಆರಂಭಿಸಿದರು.

ಈ ಬಾರಿಯ ಚುನಾವಣೆಯಲ್ಲಿ ಉತ್ತಮ ಮತ್ತು ಪಾರದರ್ಶಕ ಆಡಳಿತ, ಶೈಕ್ಷಣಿಕ ಅಭಿವೃದ್ಧಿ, ಹೊಸ ಕೋರ್ಸ್‌ಗಳ ಪ್ರಾರಂಭದ ಗುರಿಯ ಜೊತೆಯಲ್ಲಿ ದಾನಿಗಳ ವಂಶಸ್ಥರು ಮತ್ತು ಸಂಸ್ಥಾಪಕರ ಕುಟುಂಬದ ಸದಸ್ಯರಿಗೆ ಸ್ಪರ್ಧೆಗೆ ಆದ್ಯತೆ ನೀಡಿ ಮತ ಕೇಳುತ್ತಿದ್ದೇವೆ. ಸಂಘದ ಆಜೀವ ಸದಸ್ಯರು ಬದಲಾವಣೆಗಾಗಿ



'ಯುವಕವೃಂದ'ಕ್ಕೆ ಸ್ವಯಂ ಸ್ಫೂರ್ತಿಯಿಂದ ಬೆಂಬಲ ನೀಡುತ್ತಿದ್ದಾರೆ. ಸ್ಪಷ್ಟವಾದ ಬಹುಮತದ ವಿಶ್ವಾಸವಿದೆ ಎಂದರು.

ತಂಡದ ನೇತೃತ್ವವಹಿಸಿರುವ ಮುಂಡಾಸದ ಮುಪ್ಪಣ್ಣ, ಹಾವಿನಹಾಳ್ ಶರಣಪ್ಪ, ಗುರುಪಾದಯ್ಯ ಕಲ್ಮಠ್, ಎಸ್.ಎಂ. ಷಡಕ್ಷರಯ್ಯಸ್ವಾಮಿ, ಎಚ್. ಪಾಲಾಕ್ಷರೆಡ್ಡಿ, ಕಸಪಾ ಜಿಲ್ಲಾ ಮಾಜಿ ಅಧ್ಯಕ್ಷ ಎಚ್. ಹಂಪನಗೌಡ, ವೀವಿ ಸಂಘದ ಮಾಜಿ ಅಧ್ಯಕ್ಷ ಅಲ್ಲಂ ಬಸವರಾಜ್, ಹಾಲಿ ಅಧ್ಯಕ್ಷ ಆರ್. ರಾಮನಗೌಡ, ಹರಗಿನಡೋಣಿ ಮಹಾರುದ್ರಗೌಡರು ಅವರು ಮಾತನಾಡಿ, ಹಾನಗಲ್ಲು ಶ್ರೀಕುಮಾರೇಶ್ವರರು ಮತ್ತು ಸಿದ್ಧಲಿಂಗ ಶಿವಾಚಾರ್ಯ ಭಗವತ್ಪಾದರು ಪ್ರಾರಂಭಿಸಿರುವ ವೀರಶೈವ ವಿದ್ಯಾವರ್ಧಕ ಸಂಘಕ್ಕೆ 108 ವರ್ಷಗಳಾಗಿವೆ ಎಂದು ತಂಡವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಅಭ್ಯರ್ಥಿಗಳು ಆಜೀವ ಸದಸ್ಯರಿಂದ ಆಶೀರ್ವಾದ ಪಡೆಯಲು ಮನೆ ಮನೆ ಭೇಟಿ ನೀಡುವಾಗ ಮತ ನೀಡುವ ವಿಶ್ವಾಸ ವ್ಯಕ್ತಪಡಿಸಿ, ಗೆಲ್ಲಿಸುವ ಭರವಸೆ ನೀಡುತ್ತಿದ್ದಾರೆ ಎಂದರು.

ತಂಡದ ನೇತೃತ್ವವಹಿಸಿರುವ ಡಾ. ಕೆ. ಮಹಾಂತೇಶ್, ಡಾ. ಭಾಗ್ಯಲಕ್ಷ್ಮಿ ಮತ್ತು ನಾಡಗೌಡ್ರ ರುದ್ರಗೌಡ ಅವರು, ನಮ್ಮ ತಂಡಕ್ಕೆ ಬಹುತೇಕ ಆಜೀವ ಸದಸ್ಯರು ಮಾರ್ಗದರ್ಶನ ನೀಡುತ್ತಿದ್ದಾರೆ. ಈ ಬಾರಿಯ ಫಲಿತಾಂಶ ಆಶಾದಾಯಕವಾಗಿದ್ದು, ನಮ್ಮ ತಂಡವು ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬರುವ ನಂಬಿಕೆ ಇದೆ. ತಂಡದಲ್ಲಿ ಉತ್ತಮ ಹಿನ್ನಲೆ ಹೊಂದಿರುವ, ಪ್ರತಿಭಾವಂತರನ್ನು, ವಿದ್ಯಾವಂತರನ್ನು ಹೊಸ ಅಭ್ಯರ್ಥಿಗಳನ್ನಾಗಿ ಪರಿಚಯಿಸಿರುವುದು ನಮ್ಮ ತಂಡಕ್ಕೆ ಆಶಾದಾಯಕವಾಗಿದೆ ಎಂದರು.

ಕಾರ್ಯಕಾರಿ ಸಮಿತಿಯ ಸದಸ್ಯ ಟಿ. ವಿರೂಪಾಕ್ಷಗೌಡ ಇನ್ನಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. 'ಯುವಕವೃಂದ'ಕ್ಕೆ ಬೆಂಬಲ ನೀಡುವ ಮತ್ತು ಹಿತೈಷಿಗಳಾಗಿದ್ದ ಆಜೀವ ಸದಸ್ಯರು ಅನೇಕರು ವಿಶೇಷ ಪೂಜೆಯಲ್ಲಿ ಪಾಲ್ಗೊಂಡು ಶುಭಕೋರಿದರು.

# ಫೆ.26 ಶ್ರೀ ಮಡಿವಾಳ ಮಾಚಿದೇವ ಜಯಂತಿ

**ಹಂಪಿ ಟೈಮ್ಸ ಕೊಪ್ಪಳ**

ಜಿಲ್ಲಾಡಳಿತದ ವತಿಯಿಂದ ಶ್ರೀ ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮವನ್ನು ಫೆಬ್ರವರಿ 26ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದೆ.



ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರಡ್ಡಿ ಅವರು ಘನ ಉಪಸ್ಥಿತಿ ವಹಿಸುವರು. ಕೊಪ್ಪಳ ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದರಾದ ಕರಡಿ ಸಂಗಣ್ಣ, ಗಂಗಾವತಿ ಶಾಸಕರಾದ ಗಾಲಿ ಜನಾರ್ಧನರೆಡ್ಡಿ, ವಿಧಾನ ಪರಿಷತ್ ಸದಸ್ಯರುಗಳಾದ ಶರೀಲ್ ಜಿ.ನಮೋಶಿ, ಡಾ.ಚಂದ್ರಶೇಖರ್ ಬಿ.ಪಾಟೀಲ, ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪೂರ ಹಾಗೂ ಹೇಮಲತಾ ನಾಯಕ ಪಾಲ್ಗೊಳ್ಳುವರು. ವಿಶೇಷ ಆಹ್ವಾನಿತರಾಗಿ ಕೃಷ್ಣಭಾಗ್ಯ ಜಲ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ.ಮೋಹನರಾಜ ಅವರು ಆಗಮಿಸುವರು. ಹೊಸಪೇಟೆಯ ಆಕಾಶವಾಣಿಯ ಟಿ.ಜಿ.ಎಮ್.ನಾಗರತ್ನ ಅವರು ವಿಶೇಷ ಉಪನ್ಯಾಸ ನೀಡುವರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ಸುನೀಲ್ ವಂಟಗೋಡಿ ಅವರು ಉಪಸ್ಥಿತರಿರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮರಬನಳ್ಳಿ ತಿಳಿಸಿದ್ದಾರೆ.

# ಜೆ ಸಿ ಐ ನೂತನ ಅಧ್ಯಕ್ಷರಾಗಿ ನಂದೀಶ್ ತುರಕಾಣಿ ಆಯ್ಕೆ



**ಹಂಪಿ ಟೈಮ್ಸ್ ಕೊಟ್ಟೂರು:**

ಜೆಸಿಐ ಕೊಟ್ಟೂರು ಕಾಟನ್ ಸೇವಾ ಸಂಸ್ಥೆ ಹಲವು ವರ್ಷಗಳಿಂದ ತಾಲೂಕಿನಲ್ಲಿ ಉತ್ತಮ ಸಾಮಾಜ ಮುಖಿ ಕಾರ್ಯಗಳನ್ನು ನಿರ್ವಹಿಸಿ ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಪಡೆದಿದೆ, ಶಿಸ್ತು, ಸೇವೆ ಮತ್ತು ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಯುವಕರಿಗೆ ಇಲ್ಲಿ ಉತ್ತಮ ಅವಕಾಶ ವಿದ್ದು ನೂತನ ಪದಾಧಿಕಾರಿಗಳು ಇದನ್ನು ಸದುಪಯೋಗ ಪಡೆಕೊಳ್ಳಬೇಕು ಎಂದು ಸ.ಪ.ಪೂ ಕಾಲೇಜ್ ಪ್ರಾಚಾರ್ಯರು ಜಿ.ಸೋಮಶೇಖರ್ ಹೇಳಿದರು.

ಪಟ್ಟಣದ ಬಾಲಾಜಿ ಕನ್ವೆನ್ಷನ್ ಹಾಲ್ ನಲ್ಲಿ ಗುರುವಾರ ರಾತ್ರಿ ಏರ್ಪಡಿಸಿದ್ದ 2024 ನೇ ಸಾಲಿನ ಕೊಟ್ಟೂರಿನ ಜೆ.ಸಿ.ಐ ಕಾಟನನ ನೂತನ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜೆಸಿಐ ಕೊಟ್ಟೂರು ಕಾಟನ್ ನೂತನ ಅಧ್ಯಕ್ಷ ನಂದೀಶ್ ತುರಕಾಣಿ ಮಾತನಾಡಿ ಸಾರ್ವಜನಿಕರ ಸೇವೆ ಮಾಡುವ ಅವಕಾಶವನ್ನು ಜೆಸಿಐ ಕೊಟ್ಟಿದೆ ಇಲ್ಲಿ ಅತ್ಯುತ್ತಮವಾದ ಕಾರ್ಯಕ್ರಮಗಳನ್ನು ಕೈಗೊಂಡು,ಜನ ಸ್ಮರಣೆಯ ಕೆಲಸಗಳನ್ನು ಜೆಸಿಐ ಸಹಕಾರದಲ್ಲಿ ಮಾಡುವುದಾಗಿ ತಿಳಿಸಿದರು.

ಇದೇ ವೇಳೆ ಉಳಿದ ಪದಾದಿಕಾರಿಗಳನ್ನು ನೂತನ ಅಧ್ಯಕ್ಷರ ನೇತೃತ್ವದಲ್ಲಿ ಆಯ್ಕೆ ಮಾಡಲಾಯಿತು.ಮತ್ತು ಪ್ರಾಚಾರ್ಯರು ಜಿ.ಸೋಮಶೇಖರ್ ಹಾಗೂ ಸಿಪಿಐ ವೆಂಕಟಸ್ವಾಮಿ ಟಿ. ಅವರನ್ನು ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಸಿಪಿಐ ವೆಂಕಟಸ್ವಾಮಿ ಟಿ., ಸೌಮ್ಯ, ನಂದಿ ಮೆಡಿಕಲ್ ವಿಕ್ರಂ, ರಾಘವೇಂದ್ರ, ಮಹಿಳಾ ವಿಭಾಗದ ಕವಿತಾ, ವಾಣಿ ,ಪೂರ್ಣಿಮಾ, ಜಲದಾಕ್ಷಿ, ವಿದ್ಯಾಶ್ರೀ, ಕೇಶವ ಪ್ರಸಾದ್, ನಿಕಟ ಪೂರ್ವ ಅಧ್ಯಕ್ಷರು ಅಂಗಡಿ ಯೋಗಿಶ್ವರ, ಆರ್ ಎಸ್ ಚೋಪ್ರಾ, ಜೆಸಿ ಹೇಮಂತ್ ಕುಮಾರ್, ಈಶ್ವರಪ್ಪ ತುರಕಾಣಿ, ಅಂಗಡಿ ಪಂಪಾಪತಿ, ರಾಜೇಶ್ ಕುಮಾರ್, ಸಿದ್ದಯ್ಯ, ಸಾಕಪ್ಪ ರೆಡ್ಡೇರ್, ಉಪಸ್ಥಿತರಿದ್ದರು.

# ಫೆ.23ರಂದು ಕಾರಟಗಿಯಲ್ಲಿ ಮಿನಿ ಉದ್ಯೋಗ ಮೇಳ

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ಮಿನಿ ಉದ್ಯೋಗ ಮೇಳವನ್ನು ಫೆಬ್ರವರಿ 23ರಂದು ಬೆಳಿಗ್ಗೆ 10.30 ರಿಂದ 1.30 ರವರೆಗೆ ಕಾರಟಗಿಯ ನವಲಿ ರಸ್ತೆಯಲ್ಲಿನ ಜೆ.ಪಿ.ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ಈ ಮಿನಿ ಉದ್ಯೋಗ ಮೇಳದಲ್ಲಿ ಖಾಸಗಿ ಕಂಪನಿಗಳು ಭಾಗವಹಿಸಲಿದ್ದು, ತಮ್ಮಲ್ಲಿನ ಖಾಲಿ ಹುದ್ದೆಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಐ.ಟಿ.ಐ ಹಾಗೂ ಡಿಪ್ಲೋಮಾ, ಯಾವುದೇ ಪದವಿ ಅಭ್ಯರ್ಥಿಗಳಿಗೆ ನೇರ ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ, ಎಲ್ಲರಿಗೂ ಉಚಿತ ಪ್ರವೇಶವಿರುತ್ತದೆ.

ಈ ಮಿನಿ ಉದ್ಯೋಗ ಮೇಳದಲ್ಲಿ ಆಸಕ್ತಿಯುಳ್ಳ 18 ರಿಂದ 30 ವರ್ಷದ ವರೆಗಿನ ಯುವಕ ಮತ್ತು ಯುವತಿಯರು ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣಪತ್ರಗಳುಮತ್ತುಆಧಾರಕಾರ್ಡಿನಪ್ರತಿ,ಬಯೋಡಾಟಾ(ರೆಜೂಮ್) ಹಾಗೂ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ಭಾಗವಹಿಸಿ, ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ ಇವರನ್ನು ಅಥವಾ ದೂ.ಸಂ: 8105693234 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪ್ರಾಣೇಶ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ಪ್ರಧಾನಿ ಮೋದಿಯಿಂದ ಕೇಂದ್ರಿಯ ವಿದ್ಯಾಲಯ ಉದ್ಘಾಟನೆ

**ಹಂಪಿ ಟೈಮ್ಸ್ ಕೊಪ್ಪಳ**

ಗಂಗಾವತಿಯ ಆನೆಗುಂದಿ ರಸ್ತೆ ಸಾಯಿ ನಗರದ ವಿರುಪಾಪುರದಲ್ಲಿ ನೂತನವಾಗಿ ನಿರ್ಮಾಣಗೊಂಡ ಕೇಂದ್ರಿಯ ವಿದ್ಯಾಲಯದ ನೂತನ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಫೆ. 20ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ.

ಕೇಂದ್ರಿಯ ವಿದ್ಯಾಲಯ ನೂತನ ಶಾಲಾ ಕಟ್ಟಡವನ್ನು ಪ್ರಧಾನಂತ್ರಿ ನರೇಂದ್ರ ಮೋದಿ ಅವರು ವರ್ಚುವಲ್ ಮೂಲಕ ಉದ್ಘಾಟಿಸುವರು. ಕೇಂದ್ರ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಹಾಗೂ ವಾಣಿಜ್ಯೋದ್ಯಮ ಸಚಿವರಾದ ಧರ್ಮೇಂದ್ರ ಪ್ರಧಾನ ಅವರು ಗೌರವಾನ್ವಿತ ಉಪಸ್ಥಿತಿ ವಹಿಸುವರು. ಈ ಸಮಾರಂಭದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸಚಿವರಾದ ಶಿವರಾಜ ಎಸ್. ತಂಗಡಗಿ, ಕುಷ್ಟಗಿ ಶಾಸಕ ದೊಡ್ಡನಗೌಡ ಹನುಮಗೌಡ ಪಾಟೀಲ ಮತ್ತು ಯಲಬುರ್ಗಾ ಶಾಸಕ ಬಸವರಾಜ ರಾಯರಡ್ಡಿ ಇತರರು ಉಪಸ್ಥಿತಿ ವಹಿಸುವರು.

# ವೈದ್ಯಕೀಯ ಕಾಲೇಜು ನಿರ್ಮಾಣದಲ್ಲಿ ಅಕ್ರಮ

## ತನಿಖೆ ವರದಿ ನಿರೀಕ್ಷಿಸಿ ಗುತ್ತಿಗೆದಾರರ ಬಿಲ್ ಪಾವತಿಗೆ ಕ್ರಮ: ಮುಖ್ಯಮಂತ್ರಿ ಸಿದ್ದರಾಮಯ್ಯ

**ಹಾವೇರಿ:** ವೈದ್ಯಕೀಯ ಕಾಲೇಜುಗಳು ಪ್ರಾರಂಭ ಆಗಿರುವುದರಿಂದ,ತನಿಖೆಯುಮುಂದುವರಿಯಲಿದ್ದರೂ, ಕೆಲಸ ಮಾಡಿರುವ ಗುತ್ತಿಗೆದಾರರ ಬಾಕಿ ಬಿಲ್ ಗಳನ್ನು ಷರತ್ತುಬದ್ಧವಾಗಿ ತನಿಖೆ ವರದಿಯನ್ನು ನಿರೀಕ್ಷಿಸಿ ಪಾವತಿಸಲು ಸಚಿವಸಂಪುಟದಲ್ಲಿ ತೀರ್ಮಾನಿಸಲಾಗಿದೆ. ಕಾಲೇಜುಗಳ ಕಾಮಗಾರಿ ನಿಲ್ಲಬಾರದು ಎಂಬ ದೃಷ್ಟಿಯಿಂದ ಈ ತೀರ್ಮಾನ ಕೈಗೊಂಡಿರುವುದಾಗಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಭಾನುವಾರು ಮಾಧ್ಯಮದವರೊಂದಿಗೆ ಮಾತನಾಡುತ್ತಾ, ರಾಜ್ಯದ 4 ವೈದ್ಯಕೀಯ ಕಾಲೇಜುಗಳ ನಿರ್ಮಾಣದಲ್ಲಿ ಆಗಿರಬಹುದಾದ ಅಕ್ರಮದ ತನಿಖೆಗೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದರು.

**ಭ್ರಷ್ಟಾಚಾರ ನಿಗ್ರಹಕ್ಕೆ ಕ್ರಮ:**

ಈಗಿನ ಸರ್ಕಾರದಲ್ಲಿಯೂ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿ, ಭ್ರಷ್ಟಾಚಾರವನ್ನು ಕಡಿಮೆ ಮಾಡುವ ಉದ್ದೇಶ ಸರ್ಕಾರಕ್ಕಿದೆ. ಆದ್ದರಿಂದ ಭ್ರಷ್ಟಾಚಾರದಲ್ಲಿ ತೊಡಗಿರುವವರನ್ನು ಪತ್ತೆಹಚ್ಚಿ ಶಿಕ್ಷಿಸುವ ಕೆಲಸವನ್ನು ಮಾಡುತ್ತೇವೆ ಎಂದು ತಿಳಿಸಿದರು.

**ಅಕ್ಕಿ ಕೊರತೆ ಇಲ್ಲ**

ಹಿಂದುಳಿದ ವರ್ಗಗಳ ವಸತಿ ನಿಲಯಗಳಿಗೆ ಅಕ್ಕಿ ಕೊರತೆ ಕಾಡುತ್ತಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿ, ಅಕ್ಕಿ ಹಾಸ್ಟೆಲ್




ಗಳಿಗಾಗಲಿ, ಫಲಾನುಭವಿಗಳಿಗಾಗಲಿ ನೀಡುವ ಅಕ್ಕಿಸರಬರಾಜಿಗೆ ಕೊರತೆ ಇಲ್ಲ ಎಂದು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದರು.

**ಮಟ್ಕಾ ದಂಧೆ , ಪರಿಶೀಲಿಸಿ ಕ್ರಮ**

ಹಾವೇರಿ ಜಿಲ್ಲೆಯಲ್ಲಿ ಮಟ್ಕಾ ದಂಧೆ ನಡೆಯುತ್ತಿರುವ ಬಗ್ಗೆ ಮಾಹಿತಿ ಕೋರಿದ್ದಕ್ಕೆ ಉತ್ತರಿಸಿದ ಮುಖ್ಯಮಂತ್ರಿಗಳು, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

**ಮರಳು ದಂಧೆ ವಿರುದ್ಧ ಕ್ರಮ**

ತುಂಗಭದ್ರಾ ನದಿದಂಡೆಯಲ್ಲಿ ಮರಳು ದಂಧೆ ಅವ್ಯಾಹತವಾಗಿ ನಡೆಯುತ್ತಿರುವ ಬಗ್ಗೆ ಪ್ರಶ್ನಿಸಲಾಗಿ, ಮರಳು ದಂಧೆ ನಡೆಯುತ್ತಿದ್ದಲ್ಲಿ , ಕಾರಣಕರ್ತರನ್ನು ಪತ್ತೆಹಚ್ಚಿ ಕಠಿಣ ಕ್ರಮ ಕೈಗೊಳ್ಳಲಾಗುವುದು. ಅಕ್ರಮ ಮರಳು ದಂಧೆಯನ್ನು ನಿಲ್ಲಿಸಲಾಗುವುದು ಎಂದರು.

**ಕೇಂದ್ರದಿಂದ ಬರಪರಿಹಾರ ಬಂದಿಲ್ಲ**

ಸಂಕಷ್ಟದಲ್ಲಿರುವ ರೈತರಿಗೆ ಬರಪರಿಹಾರ ಸಮರ್ಪಕವಾಗಿ ತಲುಪುತ್ತಿಲ್ಲ ಎಂಬುದಕ್ಕೆ ಪ್ರತಿಕ್ರಿಯೆ ನೀಡಿ, ಸರ್ಕಾರ 5 ತಿಂಗಳ ಹಿಂದೆ ಕೇಂದ್ರ ಸರ್ಕಾರಕ್ಕೆ ಮೂರು ಮನವಿಗಳನ್ನು ಸಲ್ಲಿಸಿದೆ. 35 ಸಾವಿರ ಕೋಟಿ ರೂ.ಗಳ ಬೆಳೆ ನಷ್ಟವಾಗಿದ್ದು, ಎನ್ ಡಿ ಆರ್ ಎಫ್ ಮಾರ್ಗಸೂಚಿಗಳ ಪ್ರಕಾರ , ರಾಜ್ಯ ಸರ್ಕಾರ 18171 ಕೋಟಿ ರೂ.ಗಳ ಬರಪರಿಹಾರವನ್ನು ಕೇಂದ್ರಕ್ಕೆ ಕೋರಿದೆ. ಆದರೆ ಇಂದಿನವರೆಗೆ ಕೇಂದ್ರದಿಂದ ಹಣಬಿಡುಗಡೆ ಸೇರಿದಂತೆ ಯಾವುದೇ ಕ್ರಮ ಆಗಿಲ್ಲ ಎಂದರು.

ಸಿಎಂ ಹಾಗೂ ಡಿಸಿಎಂ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆಯೇ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆಯ ಬಗ್ಗೆ ಉತ್ತರಿಸಿ, ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ನಾಯಕರು, ಶಾಸಕರು, ಪಕ್ಷದ ಸಮಿತಿಯವರು ಸೂಚಿಸಿದ ಅಭ್ಯರ್ಥಿಯು ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ. ಲೋಕಸಭೆ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಪ್ರಾಥಮಿಕ ಸಭೆಯಾಗಿದ್ದು, ಮೊದಲ ಪಟ್ಟಿ ಸಧ್ಯದಲ್ಲಿಯೇ ಬಿಡುಗಡೆ ಮಾಡಲಿರುವುದಾಗಿ ತಿಳಿಸಿದರು

ಮೈಕ್ರೋ ನ್ಯೂಸ್

## ಬಸವಮಾರ್ಗದಿಂದ ಲೇಸಿಯ ಮಗನೂ ಗಾಂಧಿಯಾಗಬಲ್ಲ

ಮೊದಲ ಪುಟದಿಂದ

ದಲಿತರಿಗೆ ಮತ್ತು ದೇವದಾಸಿಗಳ ಮಕ್ಕಳಿಗೆ ಶಿಕ್ಷಣ ಅಸಾಧ್ಯವಾಗಿದ್ದ ಸಂದರ್ಭದಲ್ಲಿ ಬಸವಣ್ಣನ ವಚನಗಳು ಜ್ಞಾನದ ಖಡ್ಗವಾಗಿ ಮಂಜಪ್ಪನವರಿಗೆ ಲಭಿಸಿದವು ಎಂದರು. ಇದೇ ಸಂದರ್ಭದಲ್ಲಿ ದೇಹವನ್ನು ದೇವಾಲಯವಾಗಿಸಿಕೊಳ್ಳುವ ಸುಲಭ ವಿಧಾನ ಇಷ್ಟಲಿಂಗ ಪೂಜೆ-ಅನುಸಂಧಾನದ ಪ್ರಾತ್ಯಕ್ಷಿಕೆಯನ್ನು ಡಾ. ಅಜಯ್ ಕುಮಾರ ತಾಂಡೂರ್ ನಡೆಸಿಕೊಟ್ಟರು. ಶರಣೆ ಸ್ವರೂಪ ಅಜಯ್ ಕುಮಾರ್ ವಿಜಯನಗರ ಜಿಲ್ಲೆಯ ಹರಪನಹಳ್ಳಿ, ಹಡಗಲಿ, ಕೊಟ್ಟೂರು, ಹಗರಿಬೊಮ್ಮನಹಳ್ಳಿ ಮತ್ತು ಹೊಸಪೇಟೆ ಭಾಗಗಳಿಂದ ಆಗಮಿಸಿದ್ದ ನೂರು ಜನ ದೇವದಾಸಿ ತಾಯಂದಿರಿಗೆ ರುದ್ರಾಕ್ಷಿ ಕಂಕಣ ಕಟ್ಟಿ ಸೀರೆ ಕೊಟ್ಟು ಉಡಿ ತುಂಬಿದರು. ಗೌರವ ಸ್ವೀಕರಿಸಿ ಮಾತಾಡಿದ ತಾಯಂದಿರು ಅರಿವು ಆಚಾರ ಅನುಭಾವ ಟ್ರಸ್ಟ್ ನವರು ನಮ್ಮಗೆ ತವರುಮನೆಯ ಸದಸ್ಯರಾಗಿ ಪ್ರೀತಿ ತೋರಿಸುತ್ತಾರೆ ಎಂದರು. ಸಖಿ ಸಂಸ್ಥೆಯ ಮುಖ್ಯಸ್ಥೆ ಡಾ.ಭಾಗ್ಯಲಕ್ಷ್ಮಿ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಪ್ರಾಧ್ಯಾಪಕ ಡಾ ಬಸವರಾಜ ಪ್ರಾಸ್ತಾವಿಕವಾಗಿ ಮಾತಾಡಿ, ಎಲ್ಲಾ ತಾಯಂದಿರು ತಮ್ಮ ಮಕ್ಕಳನ್ನು ಹರ್ಡೇಕರ ಮಂಜಪ್ಪನವರಂತಾಗಲು ಉತ್ತೇಜಿಸಬೇಕು ಎಂದರು. ಮರಿಯಮ್ಮನಹಳ್ಳಿಯ ಮಂಜುಳಾ ಮತ್ತು ಶಿಷ್ಯ ಬಳಗ ಬಸವತತ್ವದೊಂದಿಗಿನ ತಮ್ಮ ಅನುಭಾವ ಹಂಚಿಕೊಂಡರು. ಹಿರಿಯರಾದ ಡಾ ಮಹಾಬಲೇಶ್ವರ ರೆಡ್ಡಿ, ಬಿ ಜಿ ಈಶ್ವರಪ್ಪ ಸೇರಿದಂತೆ ಇಷ್ಟಲಿಂಗ ಅಧ್ಯಯನ ಕೇಂದ್ರ, ಬಸವ ಬಳಗ, ಸಖೀ ಸಂಸ್ಥೆ, ಅಕ್ಕನ ಬಳಗದ ಸದಸ್ಯರು ಪಾಲ್ಗೊಂಡಿದ್ದರು.




# ಭಾರತ್ ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ಪ್ರಥಮ ಜಿಲ್ಲಾ ಮೇಳ ಫೆ.22ಕ್ಕೆ

### ಬೆಳಗ್ಗೆ 11 ಗಂಟೆಗೆ ವಿಜಯನಗರ ಮಹಾವಿದ್ಯಾಯಲದ ಸುವರ್ಣ ಭವನದಲ್ಲಿ

■ ಹಂಪಿ ಟೈಮ್ಸ್ ಹೊಸಪೇಟೆ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕದ ವಿಜಯನಗರ ಜಿಲ್ಲಾ ಸಂಸ್ಥೆಯಿಂದ ಪ್ರಥಮ ಜಿಲ್ಲಾ ಮೇಳ, ಸಂಸ್ಥಾಪಕರ ದಿನಾಚರಣೆ ಹಾಗೂ ರಾಜ್ಯ ಪುರಸ್ಕಾರ್ ಪ್ರಮಾಣ ಪತ್ರ ವಿತರಣಾ ಸಮಾರಂಭ ಫೆಬ್ರವರಿ 22ರಂದು ಬೆಳಗ್ಗೆ 11 ಗಂಟೆಗೆ ವಿಜಯನಗರ ಮಹಾವಿದ್ಯಾಯಲದ ಸುವರ್ಣ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು.ಬಿ ಅವರು ಕಾರ್ಯಕ್ರಮ ಉದ್ಘಾಟಿಸಿ ರಾಜ್ಯ ಪುರಸ್ಕಾರ್ ಪ್ರಮಾಣ ಪತ್ರ ವಿತರಣೆ ಮಾಡುವರು. ವಿಜಯನಗರ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಯುವರಾಜ ನಾಯ್ಕ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ವಿಜಯನಗರ ಮಹಾವಿದ್ಯಾಯಲದ ಅಧ್ಯಕ್ಷ ಅಸುಂಡಿ ಬಿ.ನಾಗರಾಜ ಗೌಡ, ಹೊಸಪೇಟೆಯ ಡಿ.ಎ.ವಿ ಪಬ್ಲಿಕ್ ಶಾಲೆ ಮತ್ತು ರೋಸ್ ಬಡ್ ಶಾಲೆಯ ಛೇರ್‌ಮನ್‌ರಾದ ಎಂ.ಕೆ.ರವಿಂದ್ರ, ವಿಜಯನಗರ ಮಹಾವಿದ್ಯಾಯಲದ ಪ್ರಾಚಾರ್ಯರಾದ ಪ್ರೋ ಟಿ.ಸುಭಾಷ್, ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಂ.ಚನ್ನಬಸಪ್ಪ ಅವರು ಭಾಗವಹಿಸುವರು. ಕಾರ್ಯಕ್ರಮದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ತಾಲ್ಲೂಕು ಕಾರ್ಯದರ್ಶಿ, ಜಿಲ್ಲಾ ಮತ್ತು ತಾಲೂಕು ಖಜಾಂಚಿ ಹಾಗೂ ಇತರ ಪದಾಧಿಕಾರಿಗಳು ಪಾಲ್ಗೊಳ್ಳುವರು ಎಂದು ಸಂಸ್ಥೆಯ ಜಿಲ್ಲಾ ಕಾರ್ಯದರ್ಶಿಗಳಾದ ಪಿ.ಮಂಜುನಾಥಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.










Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA